ಗುರುತರವಾದ ನುರಿತ ಕುಶಲ ಕರ್ಮಿಗಳ ಅವಶ್ಯಕತೆ ಹೈಟೆಕ್ ಏರಿಯಾದಲ್ಲಿ ಇದೆ. ಆದ್ದರಿಂದ ಇದನ್ನು ನಾವು ಮನಗಂಡು ಜಿಟಿಟಿಸಿ ಎನ್ನತಕ್ಕ ಸಂಸ್ಥೆಯನ್ನು ಸ್ಥಾಪನೆ ಮಾಡಬೇಕು ಎನ್ನತಕ್ಕ ಉದ್ದೇಶ ಸರ್ಕಾರಕ್ಕೆ ಇದೆ. ಇದಕ್ಕೆ ಸಹಾಯವನ್ನು ಯಾಚಿಸಿ ಕೇಂದ್ರ ಸರ್ಕಾರಕ್ಕೆ ಒಂದು ಪ್ರಪೊಸಲ್‌ನ್ನು ಕಳಿಸುವವರಿದ್ದೇವೆ. ಆ ಸಂದರ್ಭದಲ್ಲಿ ಆದ್ಯತೆ ಮೇರೆಗೆ ಗದಗ ಒಂದು ಜಿಲ್ಲೆಯಾದರಿಂದ ಅಲ್ಲಿ ಒಂದು ಜಿಟಿಟಿಸಿ ಕೇಂದ್ರವನ್ನು ತೆರೆಯಲು ನಾವು ಖಂಡಿತ ಪ್ರಯತ್ನ ಮಾಡುತ್ತೇವೆ.

ಅಧ್ಯಕ್ಷರು : ನೀವು ಕೇಳಿದ್ದು ಅದೇ, ಅವರು ಹೇಳಿದ್ದು ಅದೇ ಆಯಿತಲ್ಲಾ ಬಿಡಿ. ಮತ್ತೇನು?

ಶ್ರೀ ಡಿ. ಆರ್. ಪಾಟೀಲ್ : ಆದ್ಯತೆ ಮೇರೆಗೆ ಎಂದು ಹೇಳಿದ್ದಾರೆ. ಪ್ರಥಮ ಆದ್ಯತೆ ಕೊಟ್ಟರೆ ಸಂತೋಷವಾಗುತ್ತದೆ.

ಅಧ್ಯಕ್ಷರು : ಆಯಿತು ಬಿಡಿ ಅವರು ಮಾಡುತ್ತಾರೆ. ಮೊದಲೆಲ್ಲಾ ಅವರನ್ನು ಮಾನಸಿಕವಾಗಿ ತಯಾರು ಮಾಡಿದ್ದೀರಲ್ಲಾ.

ಹುಬ್ಬಳ್ಳಿ ನಗರದಲ್ಲಿ ಸಾರ್ವಜನಿಕರ ಶೌಚಾಲಯಗಳು.

565 - ಶ್ರೀ ಅಶೋಕ ಕಾಟವೆ (ಹುಬ್ಬಳ್ಳಿ ನಗರ) : ಮಾನ್ಯ ಪೌರಾಡಳಿತ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಹುಬ್ಬಳ್ಳಿ ಮಹಾನಗರದಲ್ಲಿರುವ ಪುರುಷ ಹಾಗೂ ಮಹಿಳಾ ಸಾರ್ವಜನಿಕ ಶೌಚಾಲಯಗಳ ಸಂಖ್ಯೆ ಎಷ್ಟು?*

ಆ) *ಅವುಗಳ ನಿರ್ವಹಣೆಯನ್ನು ಯಾರಿಗೆ ವಹಿಸಿಕೊಡಲಾಗಿದೆ, ಯಾವ ಕರಾರಿನ ಮೇಲೆ ವಹಿಸಿಕೊಡಲಾಗಿದೆ?*

ಇ) *ಕಳೆದ 3 ವರ್ಷಗಳಲ್ಲಿ ನಗರಪಾಲಿಕೆಯವರು ಇದಕ್ಕಾಗಿ ವೆಚ್ಚ ಮಾಡಿರುವ ಮೊತ್ತ ಎಷ್ಟು?*

ಶ್ರೀ ಮೀರಾಜುದ್ದೀನ್ ಎನ್. ಪಟೇಲ್ (ಪೌರಾಡಳಿತ ರಾಜ್ಯ ಸಚಿವರು) :

ಅ) ಹುಬ್ಬಳ್ಳಿ-ಧಾರವಾಡ ಮಹಾನಗರ ಪಾಲಿಕೆಯಲ್ಲಿ ಪುರುಷರ ಮತ್ತು ಮಹಿಳೆಯರ ಸಾರ್ವಜನಿಕ ಶೌಚಾಲಯಗಳು ಒಟ್ಟು 1337.

	ಬ್ಲಾಕುಗಳು			ಸೀಟುಗಳು		
	ಪು	ಮ	ಒಟ್ಟು	ಪು	ಮ	ಒಟ್ಟು
ಹುಬ್ಬಳ್ಳಿ	73	67	140	460	440	900
ಧಾರವಾಡ	41	26	67	237	200	437
ಒಟ್ಟು	**114**	**93**	**207**	**697**	**640**	**1337**

'ಆ' ನಲ್ಲಿ ಉತ್ತರಿಸಿರುವ ಶೌಚಾಲಯಗಳ ಸ್ವಚ್ಛತೆ- ಕಾರ್ಯನಿರ್ವಹಣೆಯನ್ನು ಲಭ್ಯವಿದ್ದ ಪೌರಕಾರ್ಮಿಕ ಸಿಬ್ಬಂದಿಯಿಂದ (ಪಿ.ಎಲ್. ಬಿ: ಪಬ್ಲಿಕ್ ಲಾಟ್ರಿನ್ ಭಂಗಿ) ಪೂರೈಸಿಕೊಳ್ಳಲಾಗುತ್ತಿದೆ.

ಇ) ಹುಬ್ಬಳ್ಳಿ ವಿಭಾಗದ ಇಂದಿರಾ ಗಾಜಿನ ಉದ್ಯಾನವನದಲ್ಲಿದ್ದ ಶೌಚಾಲಯ ಒಂದನ್ನು ಶ್ರೀ ಎಮ್.ಎಸ್ ಧಾರವಾಡಕರ ಗುತ್ತಿಗೆದಾರ ಇವರಿಗೆ ಪ್ರತಿವರುಷಕ್ಕೆ ರೂ. 12,500-00 ಗಳಂತೆ ಸಾರ್ವಜನಿಕರಿಂದ ನಿಗದಿತ ಶುಲ್ಕ ವಸೂಲು ಮಾಡಿ ಸ್ವಚ್ಛತೆಯನ್ನು ಕಾಪಾಡಿಕೊಳ್ಳುವ ಕರಾರಿನ ಮೇಲೆ ಕೊಡಲಾಗಿದೆ ಹಾಗೂ ಧಾರವಾಡ ವಿಭಾಗದ ಸೂಪರ ಮಾರುಕಟ್ಟೆಯಲ್ಲಿದ್ದ ಒಂದು ಶೌಚಾಲಯವನ್ನು ಶ್ರೀ ಸಣ್ಣಕ್ಕಿ ಗುತ್ತಿಗೆದಾರ ಇವರಿಗೆ ಸ್ಥಾಯಿ ಸಮಿತಿ ಸ್ವೀಕರಿಸಿದ ಗೊತ್ತುವಳಿಯನ್ವಯ ಪ್ರತಿ ವರ್ಷ ರೂ. 1,000-00 ರಂತೆ ಸಾರ್ವಜನಿಕರಿಂದ ನಿಗದಿತ ಶುಲ್ಕ ವಸೂಲು ಮಾಡಿ ಸ್ವಚ್ಛತೆ ಕಾಪಾಡಿಕೊಳ್ಳುವ ಕರಾರಿನ ಮೇಲೆ ಕೊಡಲಾಗಿದೆ.

ಈ)	1994-95	1995-96	1996-97
ರಿಪೇರಿಗಾಗಿ	ರೂ. 1,43,587	2,33,232	3,48,032
ಕ್ರಿಮಿನಾಶಕ ಇತ್ಯಾದಿ	30,000	35,000	35,000

ಶ್ರೀ ಅಶೋಕ್ ಕಾಟವೆ : ಮಾನ್ಯ ಅಧ್ಯಕ್ಷರೆ, ಹುಬ್ಬಳ್ಳಿ-ಧಾರವಾಡ ಮಹಾನಗರದಲ್ಲಿ ಇರುವ ಶೌಚಾಲಯಗಳು ಎಷ್ಟು ಎಂದರೆ, 1337 ಎಂದು ಹೇಳಿದ್ದಾರೆ. ವರ್ಷಕ್ಕೆ ಖರ್ಚು ಎಷ್ಟು ಮಾಡಿದ್ದಾರೆ ಎಂದರೆ, ವರ್ಷಕ್ಕೆ 30-35 ಸಾವಿರ ಎಂದು ಹೇಳಿದ್ದಾರೆ. ಒಂದು ಶೌಚಾಲಯಕ್ಕೆ ತಿಂಗಳಿಗೆ 2-25 ಪೈ. ಖರ್ಚು ಮಾಡಿದರೆ ಆ ಶೌಚಾಲಯಗಳು ಹೇಗೆ ಇರಬಹುದು ಎಂಬುದನ್ನು ತಾವು ಊಹಿಸಬಹುದು. ಸಂಪೂರ್ಣ ಹುಬ್ಬಳ್ಳಿ-ಧಾರವಾಡ ಮಹಾನಗರದಲ್ಲಿರುವ ಶೌಚಾಲಯಗಳು ನರಕಯಾತನೆಯಾಗಿದೆ. ನಮ್ಮ ಭಾಗದಲ್ಲಿ ಆ ಶೌಚಾಲಯಗಳಿಗೆ ಬಡವರು ಮತ್ತು ಮಧ್ಯಮ ವರ್ಗದವರು ಹೋಗುತ್ತಾರೆ. ಈ ರೀತಿ ಇರುವ ಶೌಚಾಲಯಗಳು ಆ ಭಾಗದ ಜನರಿಗೆ ರೋಗ-ರುಜಿನಗಳು ಬರಲು ಕಾರಣವಾಗುತ್ತಿವೆ. ಈ ರೀತಿ ಇರುವ ಶೌಚಾಲಯಗಳನ್ನು ಸುಲಭ ಶೌಚಾಲಯಗಳನ್ನಾಗಿ ಮಾಡಲು ಯಾವ ರೀತಿಯಾದರೂ ಪ್ರಯತ್ನ ಮಾಡುತ್ತೀರಾ? ಬೆಂಗಳೂರಿನಲ್ಲಿ ಇರುವ ಹಾಗೆ ಹುಬ್ಬಳ್ಳಿ ನಗರದಲ್ಲಿಯೂ ಸುಲಭ ಶೌಚಾಲಯ ಮಾಡಲು ಏನಾದರೂ ಪ್ರಯತ್ನ ಮಾಡುತ್ತೀರಾ? ಕನಿಷ್ಟ 50 ಶೌಚಾಲಯಗಳನ್ನಾದರೂ ಮಾಡಲು ಹಣವನ್ನು ಒದಗಿಸಿಕೊಡುತ್ತೀರಾ?

ಶ್ರೀ ಮಿರಾಜುದ್ದೀನ್ ಎನ್. ಪಟೇಲ್ : ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರು ಹೇಳಿದ ಪ್ರಕಾರ, ಈಗಾಗಲೇ ಅಲ್ಲಿ ಇರುವ ಸ್ಥಾಯಿ ಸಮಿತಿಯವರು ತೀರ್ಮಾನ ತೆಗೆದುಕೊಂಡಿದ್ದಾರೆ. ಈ ಬಜೆಟ್‌ನಲ್ಲಿ ಶೌಚಾಲಯಗಳಿಗೆ ಹಣ ಇಟ್ಟು ಕೊಂಡಿದ್ದಾರೆ, ಅವರು ಈ ಪ್ರಪೋಸಲನ್ನು ಸರ್ಕಾರಕ್ಕೆ ಕಳುಹಿಸಿದರೆ ಅಪ್ರೂವಲ್ ಮಾಡಿ ಕೊಡುತ್ತೇವೆ.

ಶ್ರೀ ಅಶೋಕ ಕಾಟವೆ : ಈಗ ಇರುವಂತಹ ಶೌಚಾಲಯಗಳಿಗೆ ಹೆಚ್ಚಿನ ಕ್ರಿಮಿನಾಶಕಗಳನ್ನು ಕೊಡಲಿಕ್ಕೆ, ರಾಸಾಯನಿಕಗಳನ್ನು ಕೊಡಲಿಕ್ಕೆ ಏನಾದರೂ ಹಣದ ಅವಕಾಶ ಮಾಡುತ್ತೀರಾ? ಈ ರೀತಿ

ಇರುವ ಶೌಚಾಲಯಗಳಿಗೆ ಏನಾದರೂ ಹೆಚ್ಚು ಖರೀದಿ ಮಾಡಿ, ಸ್ವಚ್ಛವಾಗಿ ಇಡಲು ಏನಾದರೂ ಪ್ರಯತ್ನ ಮಾಡುತ್ತೀರಾ?

ಶ್ರೀ ಮಿರಾಜುದ್ದೀನ್ ಎನ್. ಪಟೇಲ್ : ಮಾನ್ಯ ಅಧ್ಯಕ್ಷರೆ, ಇಲ್ಲಿ ನಾವು ಸರ್ಕಾರದವರು ಖರ್ಚು ಮಾಡುವುದಿಲ್ಲ, ಅಲ್ಲಿಯ ಕಾರ್ಪೊರೇಷನ್‌ದವರೇ ಬಜೆಟ್‌ನಲ್ಲಿ ಹಣ ಇಟ್ಟುಕೊಂಡು ಅವರೇ ಈ ಕೆಲಸವನ್ನು ಮಾಡುತ್ತಾರೆ. ಇದಕ್ಕೆ ಬೇರೆಯಾಗಿ ಬಜೆಟ್ ಕೊಡಲು ನಮ್ಮ ಹತ್ತಿರ ಫಂಡ್ ಇಲ್ಲ. ಯಾವ ಗ್ರಾಂಟ್ಸ್‌ಗಳನ್ನು ಕಾರ್ಪೊರೇಷನ್‌ಗೆ ಕೊಡಬೇಕು ಅವುಗಳನ್ನು ನಾವು ಕೊಡುತ್ತಿದ್ದೇವೆ. ಅವರೆ ಕೌನ್ಸಿಲ್‌ದಲ್ಲಿ ವಿಚಾರ ಮಾಡಿ ಯಾವ ರೀತಿ ಮಾಡಬೇಕೆಂಬುದು ಅವರಿಗೆ ಬಿಟ್ಟ ವಿಷಯ ಅದನ್ನು ಅವರೇ ಮಾಡಬೇಕು.

ಶ್ರೀ ಅಶೋಕ ಕಾಟವೆ : ಆ ಕಾರ್ಪೊರೇಷನ್‌ರವರ ಹತ್ತಿರ ಹಣ ಇಲ್ಲ. ಆದ್ದರಿಂದ ರಾಜ್ಯ ಸರ್ಕಾರ ಏನಾದರೂ ವಿಶೇಷ ಅನುದಾನ ಕೊಟ್ಟು ಈ ಹೆಲ್ತ್ ಸ್ಯಾನಿಟೇಷನ್ ಬಗ್ಗೆ ವಿಚಾರ ಮಾಡಿ. ಎರಡನೆಯದಾಗಿ ಆ ಶೌಚಾಲಯಗಳನ್ನು ಕಟ್ಟಲು ತಾವು ಏನಾದರೂ ವಿಶೇಷ ಫಂಡನ್ನು ಕೊಟ್ಟರೆ ಅನುಕೂಲವಾಗುತ್ತದೆ ಎಂದು ನಾನು ತಮ್ಮ ಮೂಲಕ ತಿಳಿಸುತ್ತೇನೆ.

ಶ್ರೀ ಮೀರಾಜುದ್ದೀನ್ ಎನ್. ಪಟೇಲ್: ಈ ಸಂಪೂರ್ಣ ಶೌಚಾಲಯ ಕಟ್ಟಲು ಬೇಕಾಗುವ ಹಣವನ್ನು ಒದಗಿಸಲು ಸರ್ಕಾರದ ಹತ್ತಿರ ಹಣ ಇಲ್ಲ. ನಾವು ಏನು ಗ್ರಾಂಟ್ಸ್ ಕೊಡುತ್ತೇವೆ, ಅದರಲ್ಲಿಯೇ ಕಾರ್ಪೊರೇಷನ್‌ದವರು ಮಾಡಿಕೊಳ್ಳಬೇಕು.

ಮೈಸೂರಿನಲ್ಲಿರುವ ರೋಗಗ್ರಸ್ತ ಕೈಗಾರಿಕೆಗಳು

566 - ಶ್ರೀ ಇ. ಮಾರುತಿರಾವ್ ಪವಾರ್ (ನರಸಿಂಹರಾಜ) : ಮಾನ್ಯ ಸಣ್ಣ ಕೈಗಾರಿಕಾ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಮೈಸೂರು ನಗರದಲ್ಲಿರುವ ಸಣ್ಣ ಕೈಗಾರಿಕೆಗಳು ಎಷ್ಟು?*

ಆ) *ಈ ಸಣ್ಣ ಕೈಗಾರಿಕೆಗಳಲ್ಲಿ ರೋಗಗ್ರಸ್ತ ಹಾಗೂ ಉತ್ತಮವಾಗಿ ನಡೆಯುತ್ತಿರುವ ಕೈಗಾರಿಕೆಗಳು ಎಷ್ಟು?*

ಇ) *ಈ ರೋಗಗ್ರಸ್ತ ಕೈಗಾರಿಕೆಗಳ ಬಗ್ಗೆ ಸರ್ಕಾರ ತೆಗೆದುಕೊಂಡ ಅಗತ್ಯ ಪರ್ಯಾಯ ಕ್ರಮವೇನು?*

ಶ್ರೀ ಬಿ. ಎ. ಮೊಹಿದ್ದೀನ್ (ಸಣ್ಣ ಕೈಗಾರಿಕಾ ಸಚಿವರು) :

ಅ) 5203.

ಆ) 89 ರೋಗಗ್ರಸ್ತವಾಗಿರುತ್ತವೆ. ಇತರೆ ಘಟಕಗಳು ಕಾರ್ಯನಿರ್ವಹಿಸುತ್ತಿವೆ.

ಇ) ರೋಗಗ್ರಸ್ಥ ಕೈಗಾರಿಕೆಗಳನ್ನು ಪುನಃಶ್ಚೇತನಗೊಳಿಸಲು ಸರ್ಕಾರಿ ರಿಯಾಯಿತಿ ಮತ್ತು